

ನಗರಗಳ ಬಾಂಬ್‌ದಾಳಿಯಿಂದ ರಕ್ಷಣೆಗಾಗಿ ಇಲ್ಲಿ ಬಂದವರಿಂದ ಟೌನ್ ಕಿಕ್ಕಿರಿದು ತುಂಬಿತ್ತಂತೆ. ನಂತರದಲ್ಲಿ ತನ್ನ ಮಾಮೂಲು ಸ್ಥಿತಿಗೆ ಮರಳಿದ ಈ ಟೌನಿನ ಜನಸಂಖ್ಯೆ ಕೇವಲ ನಾಲ್ಕೈದು ಸಾವಿರದ ಆಸುಪಾಸು.

ಕಣ್ಣೆದುರೇ ಕಂಡಿದ್ದು ಅತ್ಯಂತ ಮೋಹಕವಾದ ಕಟ್ಟಡ – ಅದುವೇ ಅಲ್ಲಿಯ ಚಾರಿತ್ರಿಕ ಪ್ರತಿಷ್ಠೆಯ 'ಶ್ಲಾಸ್ ಟೆಗೆರೆನ್ಸಿ', ಅಂದರೆ ಅರಮನೆ ಸಂಕೀರ್ಣ. ಪರ್ವತದ ಮಡಿಲಲ್ಲಿ ನಿರ್ಮಾಣವಾಗಿರೋ ಆ ಅರಮನೆ 17ನೇ ಶತಮಾನದಲ್ಲಿ ಕ್ರೈಸ್ತಗುರುಗಳ ಮೊನಾಸ್ಟರಿಯಾಗಿದ್ದು, 19ನೇ ಶತಮಾನದ ಆದಿಯಿಂದಲೂ ಬಾಯರ್ನ್‌ರಾಜ್ಯದ ರಾಜವಂಶ 'ವೀಟೆಲ್‌ಬಾಕ್' ಫ್ಯಾಮಿಲಿಯ ಒಡೆತನದಲ್ಲಿದೆ. ಚಂದದ ಕ್ಯಾಸೆಲ್, ಚರ್ಚ್, ಪುರಾತನ ಪ್ರತಿಷ್ಠಿತ ಬ್ರೂಯರಿ ಹೌಸ್ (ಬಿಯರ್ ಉತ್ಪಾದನಾ ಕೇಂದ್ರ) ಅಲ್ಲಿವೆ. ಇಡೀ ಟೌನಿನ ಸೌಂದರ್ಯಕ್ಕೆ ಕಳಶದಂತೆ 'ಶ್ಲಾಸ್ ಟೆಗೆರೆನ್ಸಿ' ಭಾಸವಾಯಿತು. ಅಲ್ಲಿಯ ಸುಪ್ರಸಿದ್ಧ ಸಾಹಿತಿ–ಕಲಾಕಾರರ ಚಾರಿತ್ರಿಕ ಒಂದೆರಡು ಕಟ್ಟಡಗಳು, ಮ್ಯೂಸಿಯಂ ಬಿಟ್ಟರೆ ಅಲ್ಲಿಯ ಜೀವಾಳ ನಿಸ್ಸಂದೇಹವಾಗಿ 'ಟೆಗೆರೆನ್ಸಿ ಲೇಕ್'. ಊರಿನ ಮಧ್ಯದಲ್ಲೊಂದು ತೊರೆಯೂ ಇದ್ದು ಸರೋವರದಲ್ಲಿ ಲೀನವಾಗುತ್ತದೆ.

ಸರೋವರದ ಮೊದಲ ನೋಟ ಮತ್ತೇರಿಸಿಬಿಟ್ಟಿತು. ಸುತ್ತಲೂ ಕೋಟೆಯಂತೆ ಸುತ್ತುವರಿದು, ತಮ್ಮದೇ ಮೈಯ ಹಿಮ ಕರಗಿಸಿ ಸಮೃದ್ಧವಾಗಿ ಸೃಷ್ಟಿಸಿರುವ ಸರೋವರದ ಸೌಂದರ್ಯಕ್ಕೆ ತಾವೇ ಮರುಳಾಗಿ, ಆ ನೀಲನೀರ ಕನ್ನಡಿಯಲ್ಲಿ ತಮ್ಮದೇ ಪ್ರತಿಬಿಂಬ ನೋಡಿಕೊಳ್ಳುತ್ತ ಧ್ಯಾನಸ್ಥಸ್ಥಿತಿಯಲ್ಲಿರುವವೇ ಎನ್ನುವಂಥ ಸೊಬಗಿನ ಆಲ್ಪ್ಸ್ ಪರ್ವತಗಳು. ಅವುಗಳ ಕೊಡುಗೆಗೆ ವಿನೀತವಾಗಿ ಮುಗುಳ್ನಗುತ್ತಾ, ಮಂದಗಮನೆಯಾಗಿ ಜುಳುಜುಳುನೆ ಹರಿದಾಡುವ ಥಳಥಳ ಸೌಂದರ್ಯದ ನೀಲಸರೋವರ. ಈ ಮಿಳಿತದ ಸ್ನಿಗ್ಧಸೌಂದರ್ಯಕ್ಕೆ ಸೋತುಹೋಗದ ಪ್ರವಾಸಿಗರೇ ಇಲ್ಲ. ಸರೋವರದಂಚಲ್ಲಿ ನಿರಾಳರಾಗಿ ವಿಹರಿಸಲು ಉದ್ದಕ್ಕೂ ವಿಶಾಲವಾದ ನಡೆವ ಪಥ (ವಾಕ್‌ವೇ), ವ್ಯವಸ್ಥಿತವಾದ ಸೌಲಭ್ಯದ ಕೆಲವೇ ಕಟ್ಟಡಗಳು ನಿಜದಲ್ಲಿ ಎಷ್ಟು ಸಮಯವಾದರೂ ಈ ತಾಣ ಬಿಟ್ಟು ಹೋಗಲು ಮನಸ್ಸು ಒಪ್ಪುವುದೇ ಇಲ್ಲ.

ಹಿಮಗಾಲದ ಕಾಣಿಕೆಯಾಗಿ ಎಲ್ಲೆಡೆ ಸುರಿದ ಹಿಮಧವಳತೆಯಲ್ಲಿ ಈ ಸರೋವರದ ಸುತ್ತಮುತ್ತ ಒಂದು ಅಲೌಕಿಕ ಸೌಂದರ್ಯ ತುಂಬಿದ್ದಂತೂ ಅನನ್ಯವಾಗಿತ್ತು. 'ಯಾವುದೇ ಬದುಕಿನ ಭಂಗವಿಲ್ಲದೆ ಹೀಗೇ ನಿರಂತರ ಇದ್ದರೆ?' – ಇಂಥ ಲಹರಿ ಉಂಟಾಗುವುದಂತೂ ಸತ್ಯಸ್ಯಸತ್ಯ! ಪ್ರಕೃತಿಗೆ ಅದೆಷ್ಟು ರೂಪ, ಅದೆಂಥ ಸೀಮಾತೀತ ಚೆಲುವು, ಮನುಷ್ಯನ ವಿಸ್ಮಯಕ್ಕೆ ಅಂತ್ಯವೇ ಇಲ್ಲ.



ಅಲ್ಲಿ ಸಾಕಷ್ಟು ವೈವಿಧ್ಯದ ಹಿಮಕ್ರೀಡೆಗಳ ಸೌಲಭ್ಯವಿದೆ. ನೀರಿನ ಆಟಗಳು, ಮೌಂಟನ್ ಹೈಕಿಂಗ್, ಸ್ಕೀಯಿಂಗ್, ಫಿಷಿಂಗ್, ಮೋಟಾರ್ ಬೈಕಿಂಗ್ ಇನ್ನೂ ಇನ್ನೂ... ಪ್ರತಿವರ್ಷ ಇಲ್ಲಿ, 'ಇಂಟರ್‌ನ್ಯಾಷನಲ್ ಮೌಂಟನ್ ಫಿಲ್ಮ್ ಫೆಸ್ಟಿವಲ್' ನಡೆಯುತ್ತದೆ. ಪರ್ವತಾರೋಹಣದ ಸುತ್ತಮುತ್ತ ಹುಟ್ಟಿಕೊಂಡ ಚಲನಚಿತ್ರಗಳ ಪ್ರದರ್ಶನವಿರುತ್ತದೆ, ಸ್ಪರ್ಧೆಯಿರುತ್ತದೆ. ಇಲ್ಲಿಯ ಮೂಲ ಆದಾಯ ಪ್ರವಾಸೋದ್ಯಮವೇ. ಹಾಗಾಗಿ ಇಲ್ಲಿನ ಆಡಳಿತ ಇಂಚಿಂಚು ಜಾಗವನ್ನೂ ಶುಭ್ರಸ್ಥಿತಿಯಲ್ಲಿಟ್ಟು, ಅಗತ್ಯವಾದ ಪರಿಸರಸ್ನೇಹಿ ಸೌಲಭ್ಯಗಳ ಕೊಟ್ಟು, ಪ್ರವಾಸಿಗರನ್ನು ಸೆಳೆಯಲು ವೈವಿಧ್ಯಮಯ ಆಕರ್ಷಣೆಗಳ ಅಭಿವೃದ್ಧಿಪಡಿಸಿಟ್ಟು 'ಬನ್ನಿ' ಎಂದು ಕೈಬೀಸಿ ಕರೆಯುತ್ತದೆ, ವಿಶ್ವದೆಲ್ಲೆಡೆಯಿಂದ ಪ್ರವಾಸಿಗರು ಮುಗಿಬಿದ್ದು ಬರುತ್ತಾರೆ, ಆರ್ಥಿಕವಾಗಿ ಜರ್ಮನಿ ಬೆಳೆಯುತ್ತಲೇ ಇದೆ.

ಸಮಯ ಸರಿದಿದ್ದು ತಿಳಿಯಲಿಲ್ಲ, ಸಾಲಲೂ ಇಲ್ಲ. ಆಗಲೇ ಎಂಟಕ್ಕೆ ಹತ್ತೇ ನಿಮಿಷ. ಅಕ್ಷರಶಃ ಓಡಿದ್ದೆ, ಮೇಲುಸಿರು ಹೊಡೆವ ಹಾಗೆ. ರೈಲು ಕಾಣಿಸಿತು, ಹೊರಡುವಂತೆ ಕೂಗಿತು, ಗಾಬರಿಯಲ್ಲಿ ಓಡಿ ಸಿನಿಮಾಗಳಲ್ಲಿ ಹತ್ತುವಂತೆ ಯಾರದೋ ಕೈಹಿಡಿದು ರೈಲೊಳಗೆ ನುಗ್ಗಿ ಕೂತರೆ, ಉಸಿರು ನಿಂತಂತಾಯ್ತು. ಹತ್ತಿರದ ಸೀಟಲ್ಲಿ ಕುಸಿದೆ. ಐದೇ ನಿಮಿಷ, ಮತ್ತೆ ಕಿಟಕಿಯಿಂದ ಕಂಡ ಟೆಗೆರೆನ್ಸಿಯ ಹಿಮಾವೃತ ದೃಶ್ಯಗಳಲ್ಲಿ ಆಯಾಸ ಹೇಳಹೆಸರಿಲ್ಲದೆ ಓಡಿದ್ದು, ಆ ಪ್ರಕೃತಿಯ ಮಾಂತ್ರಿಕ ಸೌಂದರ್ಯದ ಮಾಯೆಯಾಗಿತ್ತು. ■